**ಸಾಕ್ಷಿಯನ್ನು ದಿನಾಂಕಃ 19-02-2026 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ- ವಾದಿ ಪರ ಶ್ರೀ. ಎಚ್.ಎ.ಕೆ ವಕೀಲರಿಂದ.**

ವಾದಿ ಮೊದಲಿನಿಂದಲೂ ನಮ್ಮ ಕಾರ್ಖಾನೆಯ ಜೊತೆ ವ್ಯವಹಾರ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿ. ಪ್ರತಿವಾದಿ ಸಕ್ಕರೆ ಕಾರ್ಖಾನೆ ಪ್ರವೀಣ ಹಲಗತ್ತಿ ಇವರ ಪರವಾಗಿ ಅದರ ಒಟ್ಟು ಮುಕ್ತಿಯ್ಯಾರ ಪತ್ರವನ್ನು ನೀಡಿದ ಮೇರೆಗೆ ಅವರು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ. ಪ್ರವೀಣ ಹಲಗತ್ತಿ ರವರು ಈಗ ನಮ್ಮ ಸಕ್ಕರೆ ಕಾರ್ಖಾನೆ ಬಿಟ್ಟು ಬೇರೆ ಕಡೆ ಕೆಲಸ ಮಾಡುತ್ತಿದ್ದರಿಂದ ಅವರು ಈ ದಾವೆಯಲ್ಲಿ ಸಾಕ್ಷ ನುಡಿಯಲು ಬಂದಿರುವುದಿಲ್ಲ. ಸದರಿ ವಿಷಯದ ಬಗ್ಗೆ ನಾನು ನನ್ನ ಸಾಕ್ಷ ಪ್ರಮಾಣ ಪತ್ರ್ರದಲ್ಲಿ ಬರೆಸಿರುತ್ತೇನೆ. ಸದರಿ ಪ್ರವೀಣ ಹಲಗತ್ತಿ ಇವರು ನಮ್ಮ ಕಾರ್ಖಾನೆಯಲ್ಲಿ ಈಗ ಕೇಲಸ ಮಾಡುವುದಿಲ್ಲ ಎಂದು ತೋರಿಸಲು ದಾಖಲಾತಿಗಳನ್ನು ನಾನು ಹಾಜರ ಮಾಡಿಲರುವುದಿಲ್ಲ, ಬೇಕಾದರೆ ಹಾಜರ ಮಾಡುತ್ತೇನೆ. ನಿಡಿ-2 ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು ಎಂದು ಸಹಿ ಮಾಡಿದ್ದರ ಕೆಳಗೆ ನಮ್ಮ ಕಾರ್ಖಾನೆಯ ಶೀಲು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಡಿ-1 ದಾಖಲಲಾತಿ ಮೇಲೆ ಮ್ಯಾನೇಜಿಂಗ್ ಡೈರೆಕ್ಟರ ಅಂತಾ ಸಹಿ ಮಾಡಿದ ಕೆಳಗೆ ನಮ್ಮ ಕಾರ್ಖಾನೆಯ ಯಾವುದೇ ಶೀಲು ಇರುವುದಿಲ್ಲ ಎಂದರೆ ಸರಿ. ದಿನಾಂಕ 29.01.2019 ರಂದು ನಮ್ಮ ಕಾರ್ಖಾನೆ ಮತ್ತು ವಾದಿಯ ನಡುವೆ ನೀರೂಪಯುಕ್ತ ಸಾಮಗ್ರಿಗಳನ್ನು ಮಾರಾಟ ಮಾಡುವ ಬಗ್ಗೆ ಕರಾರು ಆಗಿತ್ತು ಎಂದರೆ ಸರಿ. ಆ ಪ್ರಕಾರ ವಾದಿ ನಮ್ಮ ಕಾರ್ಖಾನೆಗೆ ಇ.ಎಮ್.ಡಿ ಹಣವಾದ ರೂಪಾಯಿ ಎರಡು ಲಕ್ಷಗಳನ್ನು ಸಹ ಭರಣಾ ಮಾಡಿದ್ದರು ಎಂದರೆ ಸರಿ. ನಿಪಿ-3 ರಲ್ಲಿ ನಮೂದಿಸಿರುವ ಕರಾರ ನಂ.4 ರ ಪ್ರಕಾರ ವಾದಿಯು ಅವರಿಗೆ ಹಂಚಿಕೆ ಮಾಡಿದ ಸಾಮಗ್ರಿಗಳನ್ನು ಈ ಆದೇಶದ ದಿನಾಂಕದಿಂದ 30 ದಿವಸಗಳಲ್ಲಿ ಎತ್ತುವಳಿ ಮಾಡತಕ್ಕದ್ದು. ತಪ್ಪಿದಲ್ಲಿ ಎತ್ತುವಳಿಯಾಗದೆ ಬಾಕಿ ಉಳಿದ ಸಾಮಗ್ರಿಗಳನ್ನು ರದ್ದುಪಡಿಸಲಾಗುವುದು ಎಂದು ನಮೂದು ಇರುತ್ತದೆ ಎಂದರೆ ಸರಿ. ಬಾಕಿ ಉಳಿದ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಬೇಕು ಎಂದು ನಮ್ಮ ಕಾರ್ಖಾನೆಯುವರು ವಾದಿಗೆ ನೋಟಿಸನ್ನು ನೀಡಿರುತ್ತಾರೆ, ಆದರೆ ನೋಟಿಸು ನೀಡಿದ ದಿನಾಂಕ ನನಗೆ ಈಗ ನೆನಪಿರುವುದಿಲ್ಲ. ಸದರಿ ನೋಟಿಸ ವಾದಿಗೆ ಮುಟ್ಟಿದ ಬಗ್ಗೆ ಅಂಚೇ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಿರುತ್ತಿರಾ ಎಂದರೆ ಸಾಕ್ಷಿಯು ವಾದಿ ಸದರಿ ವಿಳಾಸದಲ್ಲಿ ಇರುವುದಿಲ್ಲ ಎಂದು ಪರತ ಬಂದಿರುತ್ತದೆ ಮತ್ತು ಅದನ್ನು ನಾವು ನಮ್ಮ ವಕೀಲರಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪರತ ಬಂದ ಅಂಚೇ ಲಕೋಟೆಯನ್ನು ನಾವು ನಮ್ಮ ವಕೀಲರಿಗೆ ನೀಡಿರುತ್ತೇವೆ, ಅವರು ಅದನ್ನು ನ್ಯಾಯಾಲಯದ ಮುಂದೆ ಹಾಜರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

ವಾದಿಗೆ ನೀಡಿದ ನೋಟಿಸಿನ ಮೇಲೆ ಅವನ ವಿಳಾಸ ಪ್ರವೀಣ ಸ್ಕ್ರ್ಯಾಪ್ ಮರ್ಚಂಟ್, ಚಿಂಚಲಿ ರೊಡ ರಾಯಭಾಗ ಅಂತಾ ನಮೂದು ಇತ್ತು ಎಂದರೆ ಸರಿ. ಸದರಿ ವಿಳಾಸದಿಂದ ವಾದಿ ನಮ್ಮ ಕಾರ್ಖಾನೆಯ ಜೊತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ತನ್ನ ವ್ಯವಹಾರವನ್ನು ಪ್ರವೀಣ ಸ್ಕ್ರ್ಯಾಪ್ ಮರ್ಚಂಟ್ ಅಂಕಲಿ ರೋಡ ರಾಯಬಾಗ ಎಂಬ ವಿಳಾಸದಲ್ಲಿ ಮಾಡುತ್ತಾ ಬಂದಿರುತ್ತಾನೆ ಎಂದರೆ

ಸಾಕ್ಷಿಯು ನಮ್ಮ ಕಾರ್ಖಾನೆ ಮತ್ತು ವಾದಿಯ ನಡುವೆ ವ್ಯವಹಾರ ಆಗುವಾಗ ಅವನು ಚಿಂಚಲಿ ರೊಡ ರಾಯಭಾಗ ಅಂತಾ ವಿಳಾಸವನ್ನು ನಮೂದು ಮಾಡಿದ್ದರಿಂದ ನಾವು ಸದರಿ ವಿಳಾಸಕ್ಕೆ ನೋಟಿಸನ್ನು ನೀಡಿದ್ದೇವು ಎಂದು ನುಡಿಯುತ್ತಾರೆ.

ನಿಪಿ-3 ರಲ್ಲಿ ವಾದಿ ಮತ್ತು ನಮ್ಮ ಕಾರ್ಖಾನೆ ನಡುವೆ ಆದ ಒಪ್ಪದಂದ ಕರಾರುಗಳನ್ನು ಉಲ್ಲಂಘನೆ ಮಾಡಿದರೆ ಇ.ಎಮ್.ಡಿ ಹಣವನ್ನು ಮುಟ್ಟುಗೋಲು ಮಾಡಲಾಗುತ್ತದೆ ಎಂದು ಕರಾರಿನಲ್ಲಿ ನಮೂದಿಸಿದ್ದು ಇರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಇದರ ಬಗ್ಗೆ ನಮ್ಮ ಕಾರ್ಖಾನೆಯ ಆಡಳಿತ ಮಂಡಳಿಗೆ ನಿರ್ಣಯ ತೆಗೆದುಕೊಳ್ಳಲು ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯು ಭರಣಾ ಮಾಡಿದ ಇ.ಎಮ್.ಡಿ ಹಣವನ್ನು ನಮ್ಮ ಕಾರ್ಖಾನೆಯ ಆಡಳಿತ ಮಂಡಳಿಯವರು ಮುಟ್ಟುಗೋಲು ಮಾಡಿದ ಬಗ್ಗೆ ಆದೇಶವನ್ನು ನಾವು ನ್ಯಾಯಾಲಯಕ್ಕೆ ಹಾಜರ ಮಾಡಿರುವುದಿಲ್ಲ, ಆದರೆ ನಮ್ಮ ವಕೀಲರಿಗೆ ನೀಡಿರುತ್ತೇವೆ. ನಮ್ಮ ಕಾರ್ಖಾನೆ ಮತ್ತು ವಾದಿಯ ನಡುವೆ ಆದ ವ್ಯವಹಾರವನ್ನು ನಾವು ವಾದಿಗೆ ತಿಳಿಸದೆ ಅದನ್ನು ರದ್ದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ರದ್ದು ಮಾಡುವ ಪೂರ್ವದಲ್ಲಿ ನಾವು ವಾದಿಗೆ ಯಾವುದೇ ಕಾನೂನು ಬದ್ದ ನೋಟಿಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-6 ದಾಖಲಾತಿ ಪ್ರಕಾರ ವಾದಿಯು ದಿನಾಂಕ 16.02.2019 ರಂದು ಆರ್.ಟಿ.ಜಿ.ಎಸ್ ಪ್ರಕಾರ ನಮ್ಮ ಕಾರ್ಖಾನೆಯ ಅಕೌಂಟಗೆ ರೂ.2,00,000/- ಗಳನ್ನು ವರ್ಗಾವಣೆ ಮಾಡಿರುತ್ತಾನೆ ಎಂದರೆ ಸರಿ. ಅದೇ ರೀತಿ ದಿನಾಂಕ 15.03.2019 ರಂದು ಆರ್.ಟಿ.ಜಿ.ಎಸ್ ಪ್ರಕಾರ ನಮ್ಮ ಕಾರ್ಖಾನೆಯ ಅಕೌಂಟಗೆ ರೂ.3,00,000/- ಗಳನ್ನು ವರ್ಗಾವಣೆ ಮಾಡಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿ ಕರಾರಿನ ಪ್ರಕಾರ ನಿರೂಪಯುಕ್ತ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವ ಸಮಯದಲ್ಲಿ ಅವುಗಳ ತೂಕಕ್ಕೆ ಅನುಗುಣವಾಗಿ ವಾದಿ ಸದರಿ ಮೇಲೆ ನಮೂದಿಸಿದ ಹಣವನ್ನು ನಮ್ಮ ಕಾರ್ಖಾನೆಗೆ ಭರಣಾ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 29.01.2019 ರಂದು ಆದ ವ್ಯವಹಾರದ ನಂತರ ನಿಪಿ-5 ರಲ್ಲಿ ಈ ಮೇಲೆ ನಮೂದಿಸಿದ ಹಣವನ್ನು ವಾದಿ ನಮ್ಮ ಕಾರ್ಖಾನೆಗೆ ಭರಣಾ ಮಾಡಿರುತ್ತಾನೆ ಎಂದರೆ ಸಾಕ್ಷಿಯು 75 ಟನ್ ನಿರೂಪಯುಕ್ತ ಸಾಮಗ್ರಿಗಳ ಪೈಕಿ ವಾದಿ 30 ಟನಗಳಷ್ಟು ನಿರೂಪಯುಕ್ತ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಸದರಿ ಹಣವನ್ನು ಭರಣಾ ಮಾಡಿರುತ್ತಾನೆ ಎಂದು ನುಡಿಯುುತ್ತಾರೆ. ಉಳಿದ ನಿರೂಪಯುಕ್ತ ಸಾಮಗ್ರಿಗಳನ್ನು ನಮ್ಮ ಕಾರ್ಖಾನೆಯಿಂದ ತೆಗೆದುಕೊಂಡು ಹೋಗಲು ಅನುಮತಿ ನೀಡಬೇಕು ಎಂದು ವಾದಿ ನಮ್ಮ ಕಾರ್ಖಾನೆಗೆ ಸಾಕಷ್ಟು ಬಾರಿ ಲಿಖಿತವಾಗಿ ವಿನಂತಿಸಿಕೊಂಡಿದ್ದರು ಸಹಿತ ಉಳಿದ ನಿರೂಪಯುಕ್ತ ಸಾಮಗ್ರಿಗಳನ್ನು ಅವನಿಗೆ ತೆಗೆದುಕೊಂಡು ಹೋಗಲು ಯಾವುದೇ ಅನುಮತಿ ನೀಡದೆ, ನಮ್ಮ ಕಾರ್ಖಾನೆಯವರು ಸದರಿ ವ್ಯವಹಾರವನ್ನು ವಾದಿಗೆ ತಿಳಿಸದೆ ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 08.09.2020 ರಂದು ವಾದಿ ನಿಪಿ-5 ರಂತೆ ನಮ್ಮ ಕಾರ್ಖಾನೆಗೆ ಅರ್ಜಿಯನ್ನು ನೀಡಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ವಾದಿಗೆ ಉಳಿದ ನಿರುಪಯುಕ್ತ ಸಾಮಗ್ರಿಗಳನ್ನು

ತೆಗೆದುಕೊಂಡು ಹೋಗಲು ಸುಮಾರು 18 ತಿಂಗಳ ಕಾಲಾವಕಾಶ ನೀಡಿದ್ದರೂ ಸಹಿತ ಅವನು ಅವುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 18 ತಿಂಗಳುಗಳ ಕಾಲಾವಧೀಯಲ್ಲಿ ಉಳಿದ ನಿರೂಪಯುಕ್ತ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ನೀವೇನಾದರೂ ನೋಟಿಸನ್ನು ನೀಡಿರುತ್ತಿರಾ ಎಂದರೆ ಸಾಕ್ಷಿಯು ನೋಟಿಸನ್ನು ನೀಡಿರುತ್ತೇವೆ ಹಾಗೂ ಇ-ಮೇಲ್ ಸಹ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಗೆ ಇ-ಮೇಲ್ ಕಳುಹಿಸಿದ ಬಗ್ಗೆ ದಾಖಲಾತಿಗಳನ್ನು ನಾವು ನ್ಯಾಯಾಲಯಕ್ಕೆ ಹಾಜರ ಮಾಡಿರುವುದಿಲ್ಲ. ನಮ್ಮ ಸಕ್ಕರೆ ಕಾರ್ಖಾನೆಯಲ್ಲಿ ನಿಗದಿತ ಅವಧಿಯಲ್ಲಿ ಕಾರ್ಖಾನೆಯ ಸಿಬ್ಬಂದಿಯವರು ಮುಷ್ಕರ ಮಾಡುತ್ತಿದ್ದು, ಆದ್ದರಿಂದ ವಾದಿಗೆ ಉಳಿದ ನಿರೂಪಯುಕ್ತ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮುಷ್ಕರದ ಬಗ್ಗೆ ನಮೂದು ಮಾಡಿ ನಿಪಿ-5 ರಂತೆ ವಾದಿ ಅರ್ಜಿಯನ್ನು ನಮ್ಮ ಕಾರ್ಖಾನೆಗೆ ನೀಡಿರುತ್ತಾನೆ ಎಂದರೆ ಸಾಕ್ಷಿಯು ವಾದಿ ಅರ್ಜಿಯನ್ನು ನೀಡಿರಬಹುದು ಆದರೆ ನಮ್ಮ ಕಾರ್ಖಾನೆಯ ಆವರಣದಲ್ಲಿ ಯಾವುದೇ ಮುಷ್ಕರ ನಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕಾರ್ಖಾನೆಯಲ್ಲಿ ಯಾವುದೇ ಮುಷ್ಕರ ನಡೆದಿರುವುದಿಲ್ಲ ಎಂದು ನಿಪಿ-5 ಕ್ಕೆ ನಿವೇನಾದರೂ ಉತ್ತರವನ್ನು ನೀಡಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಆದರೆ ಸದರಿ ಅವಧಿಯಲ್ಲಿ ನಮ್ಮ ಕಾರ್ಖಾನೆ ಮತ್ತು ಬೇರೆಯವರ ನಡುವೆ ಬೇರೆ ಬೇರೆ ವ್ಯವಹಾರಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ವಾದಿಯು ನಿಗದಿತ ಅವಧಿಯಲ್ಲಿ ಇ.ಎಮ್.ಡಿ ಹಣವನ್ನು ಕಟ್ಟಿದ್ದರು ಸಹಿತ ಅವನಿಗೆ ಉಳಿದ ನಿರೂಪಯುಕ್ತ ಸಾಮಗ್ರಿಗಳನ್ನು ನಿಗದಿತ ಅವಧಿಯಲ್ಲಿ ತೆಗೆದುಕೊಂಡು ಹೋಗಲು ನಾವೇ ಅನುಮತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂದಿಸಿದಂತೆ ವಾದಿ ನಿಪಿ-1 ರಂತೆ ನಮ್ಮ ಕಾರ್ಖಾನೆಗೆ ದಿನಾಂಕ 03.09.2022 ರಂದು ತಮ್ಮ ವಕೀಲರ ಮುಖಾಂತರ ನೋಟಿಸನ್ನು ನೀಡಿರುತ್ತಾನೆ ಎಂದರೆ ಸರಿ. ನಮ್ಮ ಕಾರ್ಖಾನೆಯವರು ನೀಡಿದ ನಿಪಿ-2 ಮರು ಉತ್ತರದಲ್ಲಿ ನಮೂದಸಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ವಾದಿಯು ನಮ್ಮ ಕಾರ್ಖಾನೆಗೆ ಭರಣಾ ಮಾಡಿದ ಇ.ಎಮ್.ಡಿ ಹಣವನ್ನು ನಾವು ಮರಳಿ ಕೊಡಲು ಬಾಧ್ಯಸ್ಥರು ಇರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.03.11 11:04:13 +0530